■ ವಿಶಾಖ ಎನ್.

# ರಜನೀ ತತ್ತ್ವ



'ಜೈಲರ್' ಚಿತ್ರದಲ್ಲಿ ರಜನೀಕಾಂತ್

ರಜನೀಕಾಂತ್ ತತ್ತ್ವಪದಕಾರರಾದಂತೆ ಮೊನ್ನೆ ಮೊನ್ನೆ ಮಾತನಾಡಿದರು.

ಮೊದಲನೆಯ ಮಾತು ಹೀಗಿದೆ: 'ಕಾಗೆ ಆಗೀಗ ತೊಂದರೆ ಕೊಡುತ್ತಿರುತ್ತದೆ. ಹಾಗೆಂದು ಹದ್ದು ಅದರ ತಂಟೆಗೆ ಹೋಗುವುದಿಲ್ಲ. ಹದ್ದು ಕಾಗೆಯಂತೆ ಅಲ್ಲ. ಅದು ಎಲ್ಲರಿಗೂ ತಂಟೆ ಮಾಡುವುದಿಲ್ಲ. ಕಾಗೆ ಕಾಟ ಕೊಟ್ಟರೂ ಅದು ಕ್ಯಾರೆ ಎನ್ನುವುದಿಲ್ಲ.'

ಎರಡನೆಯದು: 'ನನ್ನ ಬದುಕಿನಲ್ಲಿ ಮದ್ಯಪಾನ ಎನ್ನುವುದೇ ಇರದಿದ್ದರೆ ಇನ್ನಷ್ಟು ದೊಡ್ಡ ಸ್ಟಾರ್ ಆಗುತ್ತಿದ್ದೆ. ಸಮಾಜಕ್ಕೆ ಮತ್ತಷ್ಟು ಉತ್ತಮ ಕೆಲಸಗಳನ್ನು ಮಾಡಿಕೊಡುವುದೂ ಸಾಧ್ಯವಾಗಿರುತ್ತಿತ್ತು. ದುರದೃಷ್ಟವಶಾತ್ ನಾನು ಮದ್ಯವ್ಯಸನಿ ಆಗಿಬಿಟ್ಟೆ. ಅದರಿಂದ ಅನುಭವಿಸಿದ್ದು ಅಷ್ಟಿಷ್ಟಲ್ಲ.'

'ಜೈಲರ್' ತಮಿಳು ಸಿನಿಮಾದ ಆಡಿಯೊ ಬಿಡುಗಡೆ ಸಮಾರಂಭದಲ್ಲಿ ರಜನೀಕಾಂತ್ ಹೀಗೆ ಮಾತನಾಡಿದ್ದು. ಆ ಸಿನಿಮಾದಲ್ಲಿ 'ಹುಕುಂ' ಎಂಬ ಹಾಡೊಂದು ಇದೆ. ಅದರ ಸಾಹಿತ್ಯದಲ್ಲಿ ತಲಪತಿ ವಿಜಯ್ ಅವರನ್ನು ಗುರಿಯಾಗಿಸಲಾಗಿದೆ ಎಂದು ಕೆಲವರು ಆರೋಪಿಸಿದ್ದಾರೆ. 'ಇದಕ್ಕೆ ತಾವು ಏನು ಹೇಳುವಿರಿ?' ಎಂಬ ಪ್ರಶ್ನೆಗೆ ಉತ್ತರರೂಪದಲ್ಲಿ ರಜನೀಕಾಂತ್ ಮೊದಲನೆಯ ಕಥೆ ಹೇಳಿದ್ದು. ಪ್ರಶ್ನೆ ಕೇಳಿದವರು ಕಾಗೆ ಯಾರು, ಹದ್ದು ಯಾರು ಎಂದು ಮರುಪ್ರಶ್ನೆ ಮಾಡಲಿಲ್ಲ. ಉತ್ತರಿಸುವಾಗ ಸ್ಟಾರ್ ನಟನ ಮುಖದಲ್ಲಿ ಮಂದಹಾಸವಿತ್ತಷ್ಟೆ.

ಎರಡನೆಯದು, ಪಶ್ಚಾತ್ತಾಪದ ಅನುಭವ ನುಡಿ. ರಜನೀಕಾಂತ್ ಸಿನಿಮಾಗಳಲ್ಲಿ ಸಿಗರೇಟು ಹಾಗೂ ಮದ್ಯಪಾನವನ್ನು 'ಸ್ಟೈಲ್ ಸ್ಟೇಟ್‌ಮೆಂಟ್' ಆಗಿ ಬಳಸಿದ್ದೇ ಹೆಚ್ಚು. 'ಕಾಲಾ' ತಮಿಳು ಚಲನಚಿತ್ರ ಅದಕ್ಕೆ ಅಪವಾದ. ಹೊಸ ನಿರ್ದೇಶಕರ ಜತೆ ಕೆಲಸ ಮಾಡುವ ಅವರ ಉಮೇದು ಬದುಕನ್ನು ನೋಡುವ ಬಗೆಯನ್ನೂ ಬದಲಿಸುತ್ತಿರುವುದಕ್ಕೆ ಅವರ ಮಾತೇ ಕನ್ನಡಿ ಹಿಡಿಯುತ್ತದೆ.

ಅಂದಹಾಗೆ, 'ಹುಕುಂ' ಹಾಡಿನಲ್ಲಿ ಸೂಪರ್‌ಸ್ಟಾರ್ ಎಂಬ ಗುಣಗಾನದ ಪದವೊಂದು ಇತ್ತಂತೆ. ಅದನ್ನು ತೆಗೆದುಹಾಕಿ ಎಂದು ರಜನೀಕಾಂತ್ ಹೇಳಿದ ಮೇಲೆ ನಿರ್ದೇಶಕರು ಒಪ್ಪಲೇಬೇಕಾಯಿತಂತೆ. 'ಸೂಪರ್‌ಸ್ಟಾರ್' ಎನ್ನುವುದೇ ದೊಡ್ಡ ಭಾರ ಎಂದೂ ಇತ್ತೀಚೆಗೆ ಅವರು ಹೇಳತೊಡಗಿದ್ದಾರೆ.

ನೆಲ್ಸನ್ ನಿರ್ದೇಶನದ ಈ ಸಿನಿಮಾದಲ್ಲಿ ಅಭಿನಯಿಸಬೇಡಿ ಎಂದು ಅನೇಕರು ರಜನೀಕಾಂತ್ ಅವರಿಗೆ ಕಿವಿಮಾತು ಹೇಳಿದ್ದರಂತೆ. ಅದನ್ನು ತಲೆಗೆ ಹಾಕಿಕೊಳ್ಳದೆ ನಿರ್ದೇಶಕನನ್ನು ನಂಬಿ, 'ಜೈಲರ್' ಸಿನಿಮಾ ಆಗುಮಾಡಲು ರಜನೀಕಾಂತ್ ಮನಸ್ಸು ಮಾಡಿದರು. ಚಿತ್ರದ ಹಾಡುಗಳು ಈಗಾಗಲೇ ಹಿಟ್ ಆಗಿದ್ದು, ಆಗಸ್ಟ್ 10ರಂದು ಬಿಡುಗಡೆಯ ನಂತರ ಜನ ನೀಡುವ ಪ್ರತಿಕ್ರಿಯೆಗೆ ರಜನೀಕಾಂತ್ ಕೂಡ ಚಾತಕಪಕ್ಷಿಯಾಗಿದ್ದಾರೆ. ■

# ನಾಯಕಿಯ ದೃಶ್ಯಗಳಿಗೇ ಕತ್ತರಿ



ಐಶ್ವರ್ಯಾ ರಾಜೇಶ್

ತಮಿಳು, ತೆಲುಗು ಎರಡೂ ಭಾಷೆಗಳಲ್ಲಿ ಕೈತುಂಬಾ ಕೆಲಸ ಇಟ್ಟುಕೊಂಡಿರುವ ನಟಿಯರಲ್ಲಿ ಐಶ್ವರ್ಯಾ ರಾಜೇಶ್ ಪ್ರಮುಖರು. ಈ ವರ್ಷ ಅವರ ಅಭಿನಯದ ಹತ್ತು ಚಿತ್ರಗಳು ವಿವಿಧ ಹಂತಗಳಲ್ಲಿವೆ. ಇಷ್ಟು ಜನಪ್ರಿಯರಾಗಿರುವ ಅವರಿಗೂ ಒಂದು ಕಹಿ ಸುದ್ದಿ ಎದುರಾಗಿದೆ. 'ಧ್ರುವ ನಚ್ಚತ್ತಿರಂ' ತಮಿಳು ಸಿನಿಮಾದ ಮೊದಲ ಭಾಗದಲ್ಲಿ ಐಶ್ವರ್ಯಾ ಅಭಿನಯದ ಅಷ್ಟೂ ಭಾಗಗಳನ್ನು ಅಳಿಸಲಾಗಿದೆ. ನಿರ್ದೇಶಕ ಗೌತಮ್ ವಾಸುದೇವ್ ಮೆನನ್ ಇಂತಹ ಧಾರ್ಷ್ಟ್ಯದ ನಿರ್ಧಾರ ತೆಗೆದುಕೊಂಡಿದ್ದಾರೆ. ಸಿನಿಮಾದ ಒಟ್ಟಾರೆ ಅವಧಿಯನ್ನು ಕಡಿಮೆ ಮಾಡಲು ಹೀಗೆ ಮಾಡುವುದು ಅನಿವಾರ್ಯ ಎಂದು ಅವರು ನಿರ್ಧರಿಸಿದ್ದಂತೆ. ಆದರೆ, ಈ ಸಂಗತಿಯನ್ನು ಗೌತಮ್ ಮೆನನ್ ಆಗಲೀ, ಐಶ್ವರ್ಯಾ ಆಗಲೀ ಸ್ಪಷ್ಟಪಡಿಸಿಲ್ಲ.

'ಧ್ರುವ ನಚ್ಚತ್ತಿರಂ' ಸೈನ್ಸ್ ಥ್ರಿಲ್ಲರ್ ಚಿತ್ರ ಎರಡು ಭಾಗಗಳಲ್ಲಿ ಇದನ್ನು ತೆರೆಕಾಣಿಸಲು ಗೌತಮ್ ಮೆನನ್ ನಿರ್ಧರಿಸಿದ್ದಾರೆ. ಮೊದಲ ಭಾಗ ಸೆನ್ಸಾರ್‌ಗೆ ಹೋಗುವ ಮೊದಲೇ ಐಶ್ವರ್ಯಾ ರಾಜೇಶ್ ನಟನೆಯ ಭಾಗಗಳಿಗೆ ಕತ್ತರಿ ಹಾಕಿದ್ದಾರೆ ಎನ್ನಲಾಗಿದೆ.

ಹತ್ತು ವರ್ಷಗಳ ಹಿಂದೆಯೇ 'ಧ್ರುವ ನಚ್ಚತ್ತಿರಂ' ಸಿನಿಮಾವನ್ನು ಶುರುಮಾಡುವುದಾಗಿ ಗೌತಮ್ ತಿಳಿಸಿದ್ದರು. 2017ರಲ್ಲಿಯೇ ಚಿತ್ರೀಕರಣ ಮುಗಿದು, ಸಿನಿಮಾ ಇನ್ನೇನು ತೆರೆಕಾಣಲಿದೆ ಎಂದು ಸುದ್ದಿ ಹಬ್ಬಿತ್ತು. ಅದು ಮುಂದಕ್ಕೆ ಹೋಗುತ್ತಾ ಬಂದು, ಕೋವಿಡ್ ಆವರಿಸಿಕೊಂಡಿತು. ಅದಾದಮೇಲೆ ಈ ಸಿನಿಮಾ ಬಿಡುಗಡೆಯಾಗುವುದೇ ಅನುಮಾನ ಎನ್ನಲಾಯಿತು. ಈಗ ಅದಕ್ಕೆ ಮರುಜೀವ ನೀಡಿರುವ ಗೌತಮ್, ತಾವೇ ಹಾಕಿರುವ ಬಂಡವಾಳವನ್ನು ಮರಳಿ ಪಡೆಯುವ ಯೋಚನೆಯಲ್ಲಿದ್ದಾರೆ. ಹ್ಯಾರಿಸ್ ಜಯರಾಜ್ ಸ್ವರ ಸಂಯೋಜನೆಯ ಹಾಡುಗಳು ಚಿತ್ರದಲ್ಲಿವೆ. ■